ಜ್ಞಾನ ಶೀಲ ಏಕತೆ
# ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್, ಕರ್ನಾಟಕ
#55, "ಯುವಶಕ್ತಿ" 1ನೇ ಮುಖ್ಯರಸ್ತೆ, ಶೇಷಾದ್ರೀಪುರಂ, ಬೆಂಗಳೂರು –20.
Website : www.abvpsrishti.org. 080-23366456

ರಿಗೆ, ದಿನಾಂಕ : 28.5.2017

ಮಾನ್ಯ ಸಂಪಾದಕರು,
............................ ದಿನಪತ್ರಿಕೆ/ದೃಶ್ಯ ಮಾಧ್ಯಮ,
ಬೆಂಗಳೂರು.

ಮಾನ್ಯರೇ,

## ಗ್ರಾಮೀಣಾಭಿವೃದ್ಧಿಗೆ ನೂತನ ತಂತ್ರಜ್ಞಾನ ರೂಪಿಸಲು ಯುವ ವಿಜ್ಞಾನಿಗಳಿಗೆ ಬಾಬಾ ಅಣು ಸಂಶೋಧನಾ ಕೇಂದ್ರದ ಮಾಜಿ ನಿರ್ದೇಶಕರಾದ ಡಾ.ಅನೀಲ ಕಾಕೋಡ್ಕರ ಕರೆ

ಹೊಸತನ ಮತ್ತು ಉದ್ಯಮ ಶೀಲತೆಗಳು ಈ ಕಾರ್ಯಕ್ರಮದ ಮೂಲ ಉದ್ದೇಶ. ಅನ್ವೇಷಣೆ ಕೇವಲ ಹೊಸತನಕ್ಕೆ ನಾಂದಿ ಹಾಡುವುದಷ್ಟೆ ಅಲ್ಲ ಅದನ್ನು ವಾಣಿಜ್ಯೋದ್ಯಮಕ್ಕೆ ತಕ್ಕಂತೆ ಮಾರ್ಪಡಿಸಿ ಜನಸಾಮಾನ್ಯರ ಬಳಕೆಗೆ ಕೈಗೆಟುಕುವಂತೆ ಮಾಡುವುದಾಗಿದೆ. ಅನ್ವೇಷಣೆಗಳು ಗ್ರಾಮೀಣ ಭಾಗಕ್ಕೂ ತಲುಪಬೇಕು. ಕೃಷಿ ಸಾಧನಗಳಿಗೆ ಯುವ ಇಂಜಿನೀಯರುಗಳು ಹೆಚ್ಚಿನ ಒತ್ತು ನೀಡಿ ಅದಕ್ಕೆ ಪೂರಕವಾಗಿ ಕಾರ್ಯಪ್ರವೃತ್ತರಾಗಬೇಕು. ಹಾಗೂ ಗ್ರಾಮೀಣ ಭಾರತದ ಪುನಶ್ಚೇತನಕ್ಕೆ ನಿಮ್ಮ ಕೊಡುಗೆ ಅಪಾರ. ಪ್ರಧಾನಮಂತ್ರಿಯವರ ಡಿಜಿಟಲ್ ಇಂಡಿಯಾ, ಸ್ಕಿಲ್ ಇಂಡಿಯಾ ಮತ್ತು ಸ್ಟ್ಯಾಂಡ್ ಅಫ್ ಇಂಡಿಯಾಗಳ ಮೂಲಕ ಹೊಸ ಹೊಸ ಹೆಜ್ಜೆಗಳನ್ನು ಸಮಾಜಮುಖಿಯಾಗಿ ಯೋಚಿಸಿ ಮುನ್ನಡೆಯಬೇಕು. ಗ್ರಾಮೀಣಾಭಿವೃದ್ಧಿಗೆ ಯುವ ವಿಜ್ಞಾನಿಗಳು ನೂತನ ತಂತ್ರಜ್ಞಾನದ ಮೂಲಕ ರೈತರಿಗೆ ಉಪಯುಕ್ತ ಉಪಕರಣಗಳನ್ನು ಸಿದ್ಧಪಡಿಸುವುದು ಮತ್ತು ಅವರು ಬೆಳೆದ ಬೆಳೆಗಳನ್ನು ವಿಶ್ವದೆಲ್ಲೆಡೆಗೆ ನಮ್ಮಿಂದ ಅತಿ ಹೆಚ್ಚಿನ ಪ್ರಮಾಣದಲ್ಲಿ ರಪ್ತಾಗುವಂತೆ ಮಾಡುವುದು ಹಾಗೂ ಈ ಮುಖಾಂತರ ದೇಶದ ಆರ್ಥಿಕ ಪರಿಸ್ಥಿತಿಯನ್ನು ಸದೃಢಗೊಳಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಹಾಗೂ ಈ ನಿಟ್ಟಿನಲ್ಲಿ ಸೃಷ್ಠಿ ಕಾರ್ಯಕ್ರಮವು, ಸ್ಕಿಲ್ ಇಂಡಿಯಾ, ಮೆಕ್ ಇನ್ ಇಂಡಿಯಾ, ಡಿಜಿಟಲ್ ಇಂಡಿಯಾ ಮತ್ತು ಸ್ಟ್ಯಾಂಡ್ ಅಫ್ ಇಂಡಿಯಾಗಳ ಮೂಲಕ ಹೊಸ ಹೊಸ ಹೆಜ್ಜೆಗಳನ್ನು ಸಮಾಜಮುಖಿಯಾಗಿ ಯೋಚಿಸಿ ಮುನ್ನಡೆಯಬೇಕು. ಈ ನಿಟ್ಟಿನಲ್ಲಿ ಸೃಷ್ಠಿ ಕಾರ್ಯಕ್ರಮವೂ ಒಂದು ವೇದಿಕೆಯಾಗಿ ರೂಪುಗೊಂಡಿದ್ದು ಪ್ರಶಂಸಹನಾರ್ಹ ಈ ಕಾರ್ಯಕ್ರಮವನ್ನು ಕಳೆದ 15 ವರ್ಷಗಳಿಂದ ಅತ್ಯಂತ ಯಶಸ್ವಿಯಾಗಿ ಆಯೋಜಿಸುತ್ತಿರುವ ಎಬಿವಿಪಿಯ ಕಾರ್ಯ ಶ್ಲಾಘನೀಯ ಎಂದು ಬಾಬಾ ಅಣು ಸಂಶೋಧನಾ ಕೇಂದ್ರದ ಮಾಜಿ ನಿರ್ದೇಶಕರಾದ ಪದ್ಮವಿಭೂಷಣ ಡಾ.ಅನಿಲ್ ಕಾಕೋಡ್ಕರವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಎಸ್.ಟಿ.ಪಿ.ಐ ಮಹಾನಿರ್ದೇಶಕರಾದ ಡಾ.ಓಂಕಾರ್ ರೈ ಅವರು ಮಾತನಾಡುತ್ತ ಭಾರತ ದೇಶವು ಈಗಾಗಲೇ ಐಟಿಬಿಟಿ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದ್ದು ಗಣನೀಯ ಸಾಧನೆ ಮಾಡುತ್ತಿದೆ. ದೇಶದ ಯುವ ವಿಜ್ಞಾನಿಗಳು ತಮ್ಮಲ್ಲಿನ ನೂತನ ಆಲೋಚನೆಗಳಿಗೆ ತಂತ್ರಜ್ಞಾನವನ್ನು ರೂಪಿಸಿ ಅವುಗಳನ್ನು ಜನಸಾಮಾನ್ಯರಿಗೆ ಕೊಡುಗೆಯಾಗಬೇಕು.

ವಿ.ಟಿ.ಯು ಕುಲಪತಿ ಡಾ.ಕರಿಸಿದ್ದಪ್ಪರವರು ಮಾತನಾಡಿ ಬಯೋಮೆಡಿಕಲ್ ಕ್ಷೇತ್ರದಲ್ಲಿ ಹೆಚ್ಚುತ್ತಿರುವ ಅವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳಬೇಕು. ಮತ್ತು ಆ ಕುರಿತಂತೆ ಇಂದಿನ ಇಂಜನೀಯರ್ ವಿದ್ಯಾರ್ಥಿಗಳು ಹೆಚ್ಚು ಅಧ್ಯಯನಶೀಲರಾಗಬೇಕೆಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ವಿ.ಎಸ್.ಎಸ್. ಟ್ರಸ್ಟ್‌ನ ಅಧ್ಯಕ್ಷರಾದ ಪ್ರೊ.ಪಿ.ವಿ.ಕೃಷ್ಣಭಟ್ ಅವರು ಮಾತನಾಡಿ ಇಂತಹ ಸೃಷ್ಠಿ ಕಾರ್ಯಕ್ರಮದ ವೇದಿಕೆಯನ್ನು ಬಳಸಿಕೊಂಡು ತಾವು ದೇಶದ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದ ಬೆಳವಣಿಗೆಗೆ ಶ್ರಮಿಸಬೇಕೆಂದು ಕರೆ ನೀಡಿದರು. ವೇದಿಕೆ ಮೇಲೆ ಆರ್.ವಿ.ಕಾಲೇಜಿನ ಪ್ರಾಂಶುಪಾಲರಾದ ಡಾ.ಕೆ.ಎನ್ ಸುಬ್ರಹ್ಮಣ್ಯ,ಸೃಷ್ಠಿ ಸಂಚಾಲಕ ಪ್ರವೀಣ್ ಶ್ರೀನಿವಾಸ್, ರಾಜ್ಯ ಕಾರ್ಯದರ್ಶಿ ರಾಜೇಶ ಗುರಾಣಿ ಉಪಸ್ಥಿತರಿದ್ದರು.

ಕಳೆದ ಎರಡು ದಿನಗಳಿಂದ ನಡೆಯುತ್ತಿರುವ ಸೃಷ್ಠಿ–2017 ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ಸಮಾರೋಪಗೊಂಡಿತು. ಈ ತಾಂತ್ರಿಕ ಮೇಳದಲ್ಲಿ ರಾಜ್ಯದ ಸುಮಾರು 150ಕ್ಕಿಂತ ಹೆಚ್ಚು ಇಂಜನೀಯರಿಂಗ್ ಕಾಲೇಜುಗಳಿಂದ 2000ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಭಾಗವಹಿಸಿದ್ದರು. ಇದನ್ನು ವೀಕ್ಷಿಸಲು ನಗರದ ಪ್ರತಿಷ್ಠಿತ ಕಂಪೆನಿಗಳು, ಉದ್ಯಮಿಗಳು, ಶಿಕ್ಷಣಸಂಸ್ಥೆಗಳು, ಕೈಗಾರಿಕೋದ್ಯಮಿಗಳು, ಸಾರ್ವಜನಿಕರು ಭಾಗವಹಿಸಿ ಸೃಷ್ಠಿ–2017ಕ್ಕೆ ಸಾಕ್ಷಿಯಾದರು.

ಸೃಷ್ಠಿ–2017ರ ಚಾಂಪಿಯನ್‌ಶೀಪ್‌ನ್ನು ಬಾಗಲಕೋಟೆಯ ಬಸವೇಶ್ವರ ಇಂಜಿನೀಯರಿಂಗ್ ಕಾಲೇಜು, ಪ್ರಥಮ ರನ್ನರ್ ಆಫ್ ಬೆಂಗಳೂರಿನ ಸಿ.ಎಂ.ಆರ್.ಐ.ಟಿ ಕಾಲೇಜು, ದ್ವಿತಿಯ ರನ್ನರ್ ಆಫ್ ಆಗಿ ಹುಬ್ಬಳ್ಳಿಯ ಬಿ.ವಿ.ಬಿ ಕಾಲೇಜು ಮತ್ತು ವಿದ್ಯಾರ್ಥಿ ಸ್ನೇಹಿ ಕಾಲೇಜು ಪ್ರಶಸ್ತಿಯನ್ನು ಆರ್.ವಿ.ಇಂಜನೀಯರಿಂಗ್ ಕಾಲೇಜು ಪ್ರಶಸ್ತಿ ಪಡೆಯಿತು. ಒಟ್ಟು 40 ಕಾಲೇಜುಗಳ ಸುಮಾರು 110 ಪ್ರಾತ್ಯಕ್ಷಿಕೆಗಳಿಗೆ ಪ್ರಶಸ್ತಿ ಹಾಗೂ ಪ್ರಮಾಣಪತ್ರ ನೀಡಲಾಯಿತು. ಒಟ್ಟು ಪ್ರಶಸ್ತಿಯ ಮೊತ್ತ 10 ಲಕ್ಷ ರೂ ನೀಡಲಾಯಿತು.

## ಹೊಸ ಅನ್ವೇಷಣೆಗಳಿಗೆ ಪ್ರಯೋಗಾಲಯ ಹಾಗೂ ಗ್ರಂಥಾಲಯಗಳು ಸಾಧನೆಯ ಕೇಂದ್ರಗಳಾಗಬೇಕು AICTE ಚೇರ್ಮನ್ ಶ್ರೀ ಅನಿಲ್ ಸಹಸ್ರಬುದ್ಧೇ

**ಇಂಡಸ್ಟ್ರೀ ಇನ್ಸ್ಟ್ಯೂಟ್ ಎಂಬ ಸಂವಾದ ಕಾರ್ಯಕ್ರಮ :**

ಕಲಿಕೆಯು ಎಲ್ಲಾ ಆಯಾಮಗಳಿಂದಲೂ ತೆರೆದುಕೊಳ್ಳಬೇಕು. ವಿದ್ಯಾರ್ಥಿಗಳು ಉದ್ಯಮಗಳ ಜೊತೆಜೊತೆಗೆ ಕಲೆತು ,ಬೆರೆತು ಕಲಿಯಬೇಕು. ಉದ್ಯಮವು ವಿದ್ಯಾರ್ಥಿಗಳಿಂದ ಸಂವಹನ ಸಮಯ ನಿರ್ವಹಣೆ, ಕ್ರಾಸ್ ಡಿಸಿಪ್ಲೀನರೀ ಸಂಶೋಧನೆಗಳು, ಮತ್ತು ಮೌಲಿಕ ಕಾರ್ಯನಿರ್ವಹಣೆಯನ್ನು ಬಯಸುತ್ತಿದೆ. ಜೊತೆಗೆ ಶೇ.80ರಷ್ಟು ಪೂರ್ಣಕಾಲಿಕ ಪ್ರಾಧ್ಯಾಪಕರಾಗಿದ್ದರೆ ಇನ್ನು ಶೇ.20 ರಷ್ಟು ಉದ್ಯಮದಲ್ಲಿ ಕಾರ್ಯನಿರತವಾಗಿರುವ ಪರಿಣಿತರು ಕಲಿಸುವ ವ್ಯವಸ್ಥೆಗೆ AICTE ನಾಂದಿಹಾಡಲಿದೆ. ಅಲ್ಲದೆ ತಾಂತ್ರಿಕ ಶಿಕ್ಷಣದ ಒಳಗೆ ಇಂಟರ್ನ್ ಶಿಪ್ಗಳನ್ನು ಕಡ್ಡಾಯವಾಗಿ ಮಾಡುವ ಮೂಲಕ ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ಮತ್ತು ಹೊಸ ಯೋಚನೆಗಳಿಂದ ಸ್ಟಾರ್ಟ್ ಅಪ್ಗಳಿಂದಲೂ ಉದ್ಯೋಗ ಸೃಷ್ಟಿಯಾಗುತ್ತದೆ. ಹೊಸ ಅನ್ವೇಷಣೆಗಾಗಿ ಕಾಲೇಜಿನ ಲ್ಯಾಬೊರೇಟೊರಿಗಳ ಬೀಗ ತೆರೆಯಬೇಕು,ನಿಮ್ಮ ಗ್ರಂಥಾಲಯಗಳ ಉಪಯೋಗ ಹೆಚ್ಚಬೇಕು ಎಂದು AICTE ಚೇರ್ಮನ್ ಶ್ರೀ ಅನಿಲ್ ಸಹಸ್ರಬುದ್ಧೇ ಸೃಷ್ಟಿ ಕಾರ್ಯಕ್ರಮದ ಉದ್ಯಮಶಿಲತೆ ಮತ್ತು ತಾಂತ್ರಿಕ ಶಿಕ್ಷಣದ ಕುರಿತು ನಡೆದ ವೇದಿಕೆಯಲ್ಲಿ ಮಾತನಾಡಿದರು.

ನಂತರ ಮಾತನಾಡಿದ ವಿಟಿಯುನ ಉಪಕುಲಪತಿಗಳಾದ ಡಾ।ಕರಿಸಿದ್ದಪ್ಪ ಮಾತನಾಡಿ ನಿಮ್ಮೊಳಗಿನ ಶಕ್ತಿಯನ್ನು ನಂಬಿ ,ಇಂದಿನ ಶಿಕ್ಷಣ ವ್ಯವಸ್ಥೆಯ ಬಗೆಗಿನ ನಿಮ್ಮ ಪೂರ್ವಾಗ್ರಹಗಳನ್ನು ಕಳಚಿ ಕಲಿಕೆಯತ್ತ ಗಮನ ನೀಡಿ. ನಿರಂತರ ಕಲಿಕೆಯಿಂದ ಯಾವುದೇ ಅದ್ಭುತಗಳನ್ನೂ ಸಾಧಿಸಬಹುದು. ಇವತ್ತಿನ ತಂತ್ರಜ್ಞಾನದ ಹೊಸತನಕ್ಕೆ ತಕ್ಕಂತೆ ನಾವೂ ಬೆಳೆಯಬೇಕು. ಉದ್ಯಮಕ್ಕೆ ಬೇಕಾದ ಎಲ್ಲಾ ಸಾಮರ್ಥ್ಯವನ್ನು ಬೆಳೆಸಿಕೊಂಡು ಮುನ್ನಡೆಯಬೇಕೆಂದು ಕರೆ ನೀಡಿದರು.

ಆರ್.ವಿ .ಶಿಕ್ಷಣ ಸಂಸ್ಥೆಯ ಸಹ ಕಾರ್ಯದರ್ಶಿಗಳಾದ ಡಿ.ಪಿ.ನಾಗರಾಜ್ ಮಾತನಾಡಿ ಸ್ಟಾರ್ಟ್ಅಪ್ ಗಳಿಗೆ ಹೆಚ್ಚಿನ ಗಮನವನ್ನು ಯುವಕರು ನೀಡಬೇಕೆಂದು ಈ ನಿಟ್ಟಿನಲ್ಲಿ ವಿದ್ಯಾರ್ಥಿ ದೆಸೆಯಿಂದಲೇ ಯೋಚಿಸುತ್ತಾ ಬೇಕಾದ ಸ್ಕಿಲ್ಗಳನ್ನು ಪಡೆದುಕೊಳ್ಳುವತ್ತ ಗಮನ ಹರಿಸಬೇಕೆಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ನಂತರ ನಡೆದ ಸಂವಾದ ಕಾರ್ಯಕ್ರಮವನ್ನು ಪ್ರೊ.ರಾಜಾರಾಮ್ ನಡೆಸಿಕೊಟ್ಟರು. ವಿದ್ಯಾರ್ಥಿಗಳು ಅತ್ಯಂತ ಉತ್ಸಾಹದಿಂದ ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು ಅಲ್ಲದೆ ತಾಂತ್ರಿಕ ಶಿಕ್ಷಣದಲ್ಲಿನ ಪ್ರಸ್ತುತ ಸಮಸ್ಯೆಗಳ ಕಡೆಗೆ ಗಮನ ಸೆಳೆದರು.

**ವಂದನೆಗಳೊಂದಿಗೆ,**

**ಪ್ರವೀಣ್ ಶ್ರೀನಿವಾಸ್**
**ಸಂಚಾಲಕರು, ಸೃಷ್ಟಿ – 2017**
**ಮೊ : 9742752999**